ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/462/ಎಸಿಎಂ(2)/2012-13

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:04-06-2013.

**-::: ಜ್ಞಾಪನ :::-**

ವಿಷಯ: 2013-14ನೇ ಸಾಲಿನಲ್ಲಿ ನೋಡಲ್ ಸೆಂಟರ್‌ಗಳಲ್ಲಿ ON-LINE ಮೂಲಕ ಡಿಪ್ಲೋಮಾ ಪ್ರವೇಶಕ್ಕೆ ನಿರ್ದೇಶಕರ ನಾಮಿನಿಯವರನ್ನು ನೇಮಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂ. ಇಡಿ 147 ಟಿಪಿಇ 2012, ದಿ:11-06-2012.
2. ಸರ್ಕಾರದ ಆದೇಶ ಸಂ. ಇಡಿ 40 ಟಿಪಿಇ 2013, ದಿ:19-03-2013.
3. ದಿ:06-05-2013 & 03-06-2013ರಂದು ನಿರ್ದೇಶನಾಲಯದಲ್ಲಿ ನಡೆದ ಸಭಾ ನಡುವಳಿಗಳು.

**-0000000-**

2013-14ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ಸೀಟುಗಳನ್ನು ಬಿಟ್ಟು ಕೊಡುವ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಯನ್ನು ಉಲ್ಲೇಖ(1)ರ ಸರ್ಕಾರದ ಆದೇಶದ ಪ್ರಕಾರ ರಾಜ್ಯದಲ್ಲಿನ ಆಯ್ದ ನೋಡಲ್ ಸೆಂಟರ್‌ಗಳಲ್ಲಿ ON-LINE ಮೂಲಕ ನಡೆಸಲು ತೀರ್ಮಾನಿಸಲಾಗಿರುತ್ತದೆ. ಪ್ರಯುಕ್ತ, ಸದರಿ ನೋಡಲ್ ಸೆಂಟರ್‌ಗಳಲ್ಲಿ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ಪೂರ್ವಭಾವಿ ಸಿದ್ಧತೆಗಳನ್ನು ಹಾಗೂ ಪ್ರವೇಶ ಸಂಬಂಧ ಎಲ್ಲಾ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಕಂಡ ಅಧಿಕಾರಿಗಳನ್ನು ನಿರ್ದೇಶಕರ ನಾಮಿನಿಯಾಗಿ ನಿಯೋಜಿಸಲಾಗಿದೆ.

| ಕ್ರ.ಸಂ. | **ನೋಡಲ್ ಸೆಂಟರ್‌ಗಳಿಗೆ ನಿಯೋಜಿಸಲಾದ ಅಧಿಕಾರಿಗಳು**<br>ಶ್ರೀಯುತರಾದ | **ನೋಡಲ್ ಸೆಂಟರ್‌ಗಳು** |
|---|---|---|
| 1. | ಮಂಜುನಾಥ್.ಆರ್,<br>ಜಂಟಿ ನಿರ್ದೇಶಕರು(ಸಿಡಿಸಿ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸರ್ಕಾರಿ ಎಸ್.ಜೆ ಪಾಲಿಟೆಕ್ನಿಕ್, ಬೆಂಗಳೂರು |
| 2. | 1) ಶ್ರೀಕಾಂತ್,<br>ಜಂಟಿ ನಿರ್ದೇಶಕರು(ತನಿಖೆ),<br>ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,<br>ಬೆಂಗಳೂರು.<br>2) ಹರೀಶ್,<br>ಪ್ರಾಚಾರ್ಯರು,<br>ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ | ಸರ್ಕಾರಿ ಜಿ.ಆರ್.ಇನ್ಸ್‌ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್, ಬೆಂಗಳೂರು |
| 3. | ಮಹಮದ್ ಅನ್ವರ್,<br>ಪ್ರಾಚಾರ್ಯರು,<br>ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು |
| 4. | ಮಲ್ಲಿಕಾರ್ಜುನ ಶಾಪಿ,<br>ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್,<br>ಅಫ್ಜಲಪುರ | ಸರ್ಕಾರಿ ಪಾಲಿಟೆಕ್ನಿಕ್, ಗುಲ್ಬರ್ಗಾ |

| | | |
|---|---|---|
| 5. | ಲಿಂಗಮೂರ್ತಿ,<br>ಪ್ರಾಚಾರ್ಯರು,<br>ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ | ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್,<br>ದಾವಣಗೆರೆ |
| 6. | ಭೈರಪ್ಪನವರ್,<br>ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್,<br>ಗಜೇಂದ್ರಘಡ | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ |
| 7. | ಟಿ.ಎನ್.ಶಂಕರ್,<br>ಆ.ಶ್ರೇ.ಉಪನ್ಯಾಸಕರು,<br>ಸರ್ಕಾರಿ ಸ್ಕೂಲ್ ಆಫ್ ಮೈನ್ಸ್, ಕೆ.ಜಿ.ಎಫ್ | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ |
| 8. | ಸುನೀಲ್,<br>ಪ್ರಿನ್ಸಿಪಾಲರು,<br>ಸರ್ಕಾರಿ ಪಾಲಿಟೆಕ್ನಿಕ್, ಬಂಟ್ವಾಳ | ಸರ್ಕಾರಿ ಕರ್ನಾಟಕ ಪಾಲಿಟೆಕ್ನಿಕ್,<br>ಮಂಗಳೂರು. |
| 9. | ಪಾಂಡುರಂಗ ವಿಠ್ಠಲ,<br>ಪ್ರಿನ್ಸಿಪಾಲರು,<br>ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸೀಪುರ | ಶ್ರೀಮತಿ.ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್,<br>ಹಾಸನ. |
| 10. | ವಿವೇಕಾನಂದ,<br>ಪ್ರಿನ್ಸಿಪಾಲರು,<br>ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ | ಜೆ.ಎಸ್.ಎಸ್ ಮಹಿಳಾ ಪಾಲಿಟೆಕ್ನಿಕ್,<br>ಮೈಸೂರು. |
| 11. | ಕಂಚಿ,<br>ಪ್ರಾಂಶುಪಾಲರು,<br>ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ | ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ |

ಮೇಲ್ಕಂಡ ಅಧಿಕಾರಿಗಳು ತಮ್ಮ ಹೆಸರುಗಳ ಮುಂದೆ ತೋರಿಸಿರುವ ನೋಡಲ್ ಸೆಂಟರ್‌ಗಳಲ್ಲಿ ದಿ:10-06-2013ರಂದು ಕಾರ್ಯ ವರದಿ ಮಾಡಿಕೊಂಡು, 2013-14ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ON-LINE ಮೂಲಕ ಸೀಟು ಹಂಚಿಕೆಯನ್ನು ನೋಡಲ್ ಸೆಂಟರ್‌ಗಳಲ್ಲಿ ನಡೆಸಲು ಪೂರ್ವಭಾವಿ ಸಿದ್ಧತೆ ಪೂರ್ಣಗೊಳಿಸಿ ಹಾಗೂ ಪ್ರಸಕ್ತ ಸಾಲಿನ ಪ್ರವೇಶ ಪ್ರಕ್ರಿಯೆ ಮುಕ್ತಾಯವಾಗುವವರೆಗೂ ಸಂಬಂಧಪಟ್ಟ ನೋಡಲ್ ಸೆಂಟರ್‌ಗಳಲ್ಲಿ ನಿರ್ದೇಶಕರ ನಾಮಿನಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು. **ಇದಲ್ಲದೇ, ಪ್ರಸಕ್ತ ಸಾಲಿನಲ್ಲಿ ಈಗಾಗಲೇ ನೀಡಲಾಗಿರುವ ಪ್ರವೇಶಕ್ಕೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆಗಳನ್ನು ನಿಯಮಗಳ ಪ್ರಕಾರ ಪರಿಶೀಲಿಸಿ ಆಗಿಂದಾಗ್ಗೆ ವರದಿಯನ್ನು ಹಾಗೂ ಪ್ರವೇಶಕ್ಕೆ ಸಂಬಂಧಿಸಿದ ಅಂತಿಮ ವರದಿಯನ್ನು ನಿರ್ದೇಶನಾಲಯಕ್ಕೆ ನೀಡುವುದು.**

Fax No – 080-22261212
E-mail – hutalawar@yahoo.co.in,
dteacm@hotmail.com

ನಿರ್ದೇಶಕರು
4/6/13

ಗೆ,

*ಮೇಲ್ಕಂಡ ಎಲ್ಲಾ ಅಧಿಕಾರಿಗಳಿಗೆ,*

ಪ್ರತಿ:-

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ನಿರ್ದೇಶಕರ ಆಪ್ತಶಾಖೆಗೆ.
4. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂ.ಶಿ.ನಿ, ಬೆಂಗಳೂರು – ಸದರಿ ಜ್ಞಾಪನವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು.
5. ಇಎಸ್‌ಟಿ(8) ವಿಭಾಗಕ್ಕೆ.
6. ಕಛೇರಿ ಪ್ರತಿ.